ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. :1684/2018
ಪ್ರಾಸಾ : 03
ಚಾ.ಸಾ.: 06

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀಮತಿ ಕಮಲಾಬಾಯಿ ಗಂಡ ಮಹಾದೇವ ಕಳಸದವರ . |
| ವಯಸ್ಸು | : 50 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಇಂಚಗೇರಿ |

(ಈ ದಿವಸ ದಿನಾಂಕ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:

1) ಮೃತ ಮಹಾದೇವ ಸಿದ್ದಪ್ಪ ರವರು ನನ್ನ ಗಂಡನಾಗಬೇಕು. ಕಳೆದ 6 ವರ್ಷಗಳ ಹಿಂದೆ ಅವರು ರಸ್ತೆ ಅಪಘಾತದಲ್ಲಿ ನಮ್ಮ ಗ್ರಾಮದ ಸರಕಾರಿ ಆಸ್ಪತ್ರೆಯ ಬಳಿ ಸಂಜೆ 6-30 ಗಂಟೆಗೆ ಮೃತಪಟ್ಟಿರುತ್ತಾರೆ. ಸಂಜೆ 6-30 ಗಂಟೆ ಸುಮಾರಿಗೆ ನನ್ನ ಗಂಡನು ಶೌಚಾಲಯಕ್ಕೆ ಹೋಗುವಾಗ ಅಪಘಾತದಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನನ್ನ ಗಂಡನು ನಮ್ಮ ಗ್ರಾಮದಿಂದ ಹೊರ್ತಿ ಗ್ರಾಮದ ಕಡೆಗೆ ಇರುವ ರಸ್ತೆಯ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಅವರಿಗೆ ಒಂದು ಗೂಡ್ಸ್ ವಾಹನವು ಡಿಕ್ಕಿಪಡಿಸಿದ ಕಾರಣ ಅವರು ಮೃತಪಟ್ಟಿರುತ್ತಾರೆ. ಅಪಘಾತವಾದ ವಿಷಯವನ್ನು ಸಾರ್ವಜನಿಕರು ನನಗೆ ತಿಳಿಸಿರುತ್ತಾರೆ. ನಾನು ಅಪಘಾತ ಸ್ಥಳಕ್ಕೆ

ಹೋಗಿ ನೋಡಿದಾಗ ಅವರು ಅಲ್ಲಿಯೇ ಮೃತಪಟ್ಟಿರುತ್ತಾರೆ. ಆದರೂ ಸಹ ಅವರನ್ನು ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ಅವರು ಮೃತಪಟ್ಟಿರುತ್ತಾರೆಂದು ಮೃತದೇಹವನ್ನು ವಾಪಸ್ ತಂದಿರುತ್ತಾರೆ.

2) ಪೊಲೀಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

<u>ಪಾಟೀ ಸವಾಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:</u>

1) ದಿನಾಂಕ : 24–04–2018 ರಂದು ಸಂಜೆ 6–30 ಗಂಟೆ ಸುಮಾರಿಗೆ ನನ್ನ ಗಂಡನು ಚಾಸಾ–9 ರವರ ಜೊತೆ ಶೌಚಾಲಯಕ್ಕೆ ಹೋಗಲು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದನು ಎಂದರೆ ಸರಿ. ಆಗ ಗೂಡ್ಸ್ ವಾಹನ ನಂ. ಎಂ.ಎಚ್–10/ಬಿ.ಆರ್.2891 ರ ವಾಹನವು ಅತೀ ವೇಗವಾಗಿ ಬಂದು ಅವರ ಹಿಂಬದಿಯಲ್ಲಿ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಆಗ ಗೂಡ್ಸ್ ವಾಹನದ ಚಾಲಕನು ಸದರಿ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಸದರಿ ವಾಹನವು ಹೊರ್ತಿ ಕಡೆಗೆ ಮುಖ ಮಾಡಿ ನಿಂತಿತ್ತು ಎಂದರೆ ಸರಿ. ಅಪಘಾತದ ಸಂಗತಿಯನ್ನು ನನಗೆ ಚಾಸಾ–9 ರವರು ತಿಳಿಸಿರುತ್ತಾರೆ ಎಂದರೆ ಸರಿ.

2) ದಿ : 07–05–2018 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತಪಡಿಸಿದ ವಾಹನದ ಚಾಲಕನನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ವಾಹನದ ಚಾಲಕನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿ.

ಪಾಟೀ ಸವಾಲು : ಶ್ರೀ. ಎಸ್.ಆರ್.ಬಿ. ವಕೀಲರಿಂದ : ಆರೋಪಿತರ ಪರವಾಗಿ:

1) ನಾನು ಅಪಘಾತವನ್ನು ಖುದ್ದು ನೋಡಿಲ್ಲ ಎಂದರೆ ಸರಿ. ಯಾವ ವಾಹನವು ಡಿಕ್ಕಿಪಡಿಸಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಚಾಸಾ–9 ಯಾವುದೇ ಅಪಘಾತದ ಸುದ್ದಿಯನ್ನು ತಿಳಿಸಿಲ್ಲ ಎಂದರೆ ಸರಿ. ನನಗೆ ಸಾರ್ವಜನಿಕರು ತಿಳಿಸಿದ ಕಾರಣ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ವಿಮಾ ಪರಿಹಾರ ಕೋರಿ ವಿಜಯಪುರದ ಗೌರವಾನ್ವಿತ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(ದೇವರಾಜು ಹೆಚ್.ಆರ್.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. :1684/2018
ಪ್ರಾಸಾ : 04
ಚಾ.ಸಾ.: 08

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀ. ನವೇಶಾ ತಂದೆ ಮಹದೇವ ಕಳಸದ |
| ವಯಸ್ಸು | : 28 ವರ್ಷ |
| ಉದ್ಯೋಗ | : ಪ್ರಥಮ ದರ್ಜೆ ಸಹಾಯಕರು, ತಿಕೋಟಾ |
| ವಾಸ ಸ್ಥಳ | : ಇಂಚಗೇರಿ |

(ಈ ದಿವಸ ದಿನಾಂಕ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:</u>

1) ಚಾಸಾ-6 ನನ್ನ ತಾಯಿ. ಮೃತ ಮಹಾದೇವ ಸಿದ್ದಪ್ಪ ಕಳಸದವರ ನನ್ನ ತಂದೆ. ಚಾಸಾ-6 ನನ್ನ ತಮ್ಮ. ಚಾಸಾ-1 ನನ್ನ ಚಿಕ್ಕಪ್ಪ.

2) ದಿ : 24-04-2018 ರಂದು ಸಂಜೆ 7-30 ಗಂಟೆ ಸುಮಾರಿಗೆ ನನ್ನ ತಂದೆಯಾದ ಮಹಾದೇವ ಸಿದ್ದಪ್ಪ ಕಳಸದವರು ಚಾಸಾ-9 ರವರ ಜೊತೆ ಹೊರ್ತಿ ಗ್ರಾಮದ ರಸ್ತೆಯಲ್ಲಿರುವ ಸರಕಾರಿ ಆಸ್ಪತ್ರೆಯ ಬಳಿ ಶೌಚಾಲಯ ಮಾಡಲು ಹೋಗುತ್ತಿದ್ದಾಗ ಅಪಘಾತವಾಗಿದ್ದು, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಮೂಡಬಿದರಿಯ ಆಳ್ವಾಸ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ನಂತರ ನನಗೆ ನನ್ನ ತಾಯಿಯು ದೂರವಾಣಿ ಮಾಡಿ ನನ್ನ ತಂದೆ ಮೃತರಾದ ಸಂಗತಿಯನ್ನು ತಿಳಿಸಿದ್ದು, ನಾನು ನಮ್ಮ

ಗ್ರಾಮಕ್ಕೆ ಬಂದು ವಿಚಾರಿಸಿದಾಗ ಮಹಾರಾಷ್ಟ್ರ ರಾಜ್ಯದ ನೋಂದಣಿ ಸಂಖ್ಯೆ ಇದ್ದ ಗೂಡ್ಸ್ ವಾಹನವು ನನ್ನ ತಂದೆಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುವುದಾಗಿ ತಿಳಿಯಿತು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

3) ಮತ್ತೆ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತಪಡಿಸಿದ ಚಾಲಕನನ್ನು ತೋರಿಸಿರುತ್ತಾರೆ, ಆತನ ಹೆಸರು ಅಶೋಕ ಆಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

<u>ಪಾಟೀ ಸವಾಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:</u>

1) ಗೂಡ್ಸ್ ವಾಹನ ನಂ. ಎಂ.ಎಚ್–10/ಬಿ.ಆರ್.2891 ರ ವಾಹನವು ಅತೀ ವೇಗವಾಗಿ ಬಂದು ಅವರ ಹಿಂಬದಿಯಲ್ಲಿ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ಚಾಲಕನನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿ.

<u>ಪಾಟೀ ಸವಾಲು : ಶ್ರೀ. ಎಸ್.ಆರ್.ಬಿ. ವಕೀಲರಿಂದ : ಆರೋಪಿತರ ಪರವಾಗಿ:</u>

1) ನಾನು ಅಪಘಾತವಾದ ಮರುದಿನ ಮೂಡಬಿದರಿಯಿಂದ ನಮ್ಮ ಗ್ರಾಮಕ್ಕೆ ಬಂದಿರುತ್ತೇನೆ. ನನ್ನ ಹೇಳಿಕೆಯಲ್ಲಿ ವಾಹನದ ಬಣ್ಣವನ್ನು ಅಥವಾ ನೋಂದಣಿ ಸಂಖ್ಯೆಯನ್ನು ಬರೆಸಿರುವುದಿಲ್ಲ. ಆರೋಪಿಯ ಗುರುತಿನ ಚೀಟಿಯನ್ನು ನನಗೆ ಪೊಲೀಸರು ತೋರಿಸಿರುವುದಿಲ್ಲ. ಪೊಲೀಸರು ಯಾವ ದಿನಾಂಕದಂದು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ.

2) ಗೌರವಾನ್ವಿತ ವಿಜಯಪುರ ನ್ಯಾಯಾಲಯದಲ್ಲಿ ಅಪಘಾತ ವಿಮಾ ಪರಿಹಾರ ಕೋರಿ ಅರ್ಜಿ ದಾಖಲಿಸಿರುತ್ತೇನೆ ಎಂದರೆ ಸರಿ. ಆರೋಪಿ ಯಾವುದೇ ತಪ್ಪು ಮಾಡಿಲ್ಲ, ಆತನ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮಾ ಪರಿಹಾರ ಪಡೆಯಲು ಆತನು ವಿರುದ್ದ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(ದೇವರಾಜು ಹೆಚ್.ಆರ್.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. :1684/2018
ಪ್ರಾಸಾ : 05
ಚಾ.ಸಾ.: 09

ಸಾಕ್ಷಿದಾರರ ಹೆಸರು : ಶ್ರೀ. ಶಿವಲಿಂಗ ತಂದೆ ಯಶವಂತ ಬಿರಾದಾರ

ವಯಸ್ಸು : 75 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಇಂಚಗೇರಿ

(ಈ ದಿವಸ ದಿನಾಂಕ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:

1) ಮೃತ ಮಹಾದೇವ ಸಿದ್ದಪ್ಪ ಕಳಸದವರ ಪರಿಚಯ ಇದೆ. ಕಳೆದ ಮೂರು ವರ್ಷಗಳ ಹಿಂದೆ ಸಂಜೆ 6–30 ರಿಂದ 7–00 ಗಂಟೆ ಸುಮಾರಿಗೆ ನಾನು ಸೈಕಲ್ ನಲ್ಲಿ ಹೊಲಕ್ಕೆ ಹೋಗುತ್ತಿದ್ದೆ. ಆ ಸಮಯದಲ್ಲಿ ನಮ್ಮ ಗ್ರಾಮದ ಸರಕಾರಿ ಆಸ್ಪತ್ರೆಯ ಬಳಿ ಹೋಗುತ್ತಿದ್ದಾಗ ಯಾವುದೋ ಒಂದು ವಾಹನವು ಬಂದು ಮೃತ ಮಹಾದೇವನಿಗೆ ಡಿಕ್ಕಿಪಡಿಸಿರುತ್ತದೆ. ನಾನು ಓಡಿ ಹೋಗಿ ನೋಡಿದಾಗ ಆತನು ಮೃತಪಟ್ಟಿರುತ್ತಾನೆ. ಯಾವ ವಾಹನ ಡಿಕ್ಕಿಪಡಿಸಿತ್ತು ಎಂದು ನನಗೆ ಗೊತ್ತಿಲ್ಲ, ಅದರ ನಂಬರ ನನಗೆ ಗೊತ್ತಿಲ್ಲ. ವಾಹನವು ಡಿಕ್ಕಿಪಡಿಸಿ ಹೊರಟು ಹೋಗಿರುತ್ತದೆ, ಅದು ನಿಲ್ಲಿಸಲಿಲ್ಲ.

2) ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

<u>ಪಾಟೀ ಸವಾಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:</u>

1) ದಿ : 24-04-2018 ರಂದು ಹಿಂಬದಿಯಿಂದ ಗೂಡ್ಸ್ ವಾಹನ ನಂ. ಎಂ.ಎಚ್-10/ಬಿ.ಆರ್.2891 ರ ವಾಹನವು ಅತೀ ವೇಗವಾಗಿ ಬಂದು ಅವರ ಹಿಂಬದಿಯಲ್ಲಿ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾಹನ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾಹನದ ಚಾಲಕನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಲ್ಲಿ ಆರೋಪಿಯನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಶ್ರೀ. ಎಸ್.ಆರ್.ಬಿ. ವಕೀಲರಿಂದ : ಆರೋಪಿತರ ಪರವಾಗಿ:</u>

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(ದೇವರಾಜು ಹೆಚ್.ಆರ್.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.